ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

7049 2013 (2)

# ಕನ್ನಡ ಭಾಷೆ (ಪತ್ರಿಕೆ – 2)

(ಐ.ಎ.ಎಸ್./ಐ.ಪಿ.ಎಸ್. ಮತ್ತು ಐ.ಎಫ್.ಎಸ್. ಅಧಿಕಾರಿಗಳಿಗೆ ಮಾತ್ರ)

(ಪಠ್ಯಪುಸ್ತಕ ರಹಿತ)

# KANNADA LANGUAGE (PAPER – 2)

(IAS, IPS and IFS OFFICERS ONLY)

(Without Books)

ಗರಿಷ್ಠ ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು : 75

## ಸೂಚನೆಗಳು

ಅಭ್ಯರ್ಥಿಗಳು ಉತ್ತರಗಳನ್ನು ಉತ್ತರಿಸುವಾಗ ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆ ಮತ್ತು ಉಪ ಪ್ರಶ್ನೆ ಸಂಖ್ಯೆಯನ್ನು ತಪ್ಪದೇ ನಮೂದಿಸಿರತಕ್ಕದ್ದು. ಒಂದು ವೇಳೆ ನಮೂದಿಸದೇ ಉತ್ತರಿಸಿದ್ದಲ್ಲಿ, ಅಂತಹ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

While answering a question, candidates must write question number and sub question number properly. If they fail to write the same, those answers shall not be valued.

**ಸೂಚನೆ : ತಪ್ಪಿಲ್ಲದ ಮತ್ತು ಅಂದವಾದ ಬರವಣಿಗೆಗೆ 3 ಅಂಕಗಳು.**

1. ''ಅ'' ಪಟ್ಟಿಯಲ್ಲಿರುವ ಪದಗಳನ್ನು ''ಬ'' ಪಟ್ಟಿಯಲ್ಲಿರುವ ಸೂಕ್ತ ಪದಗಳೊಂದಿಗೆ ಹೊಂದಿಸಿ ಬರೆಯಿರಿ : (4×1=4)

| 'ಅ' | 'ಬ' |
|---|---|
| 1) ಕ್ರಿಯಾಪದದ ಮೂಲರೂಪ | (ಅ) ಅನುಕರಣಾವ್ಯಯ (2) |
| 2) ಪ್ರತಿ ವರ್ಗದ ಐದನೆಯ ಅಕ್ಷರ | (ಆ) ಶ್ರೀ (4) |
| 3) ಜುಳುಜುಳು | (ಇ) ಮಹಾಪ್ರಾಣಾಕ್ಷರ |
| 4) ಸಿರಿ | (ಈ) ಧಾತು (4) |
| | (ಉ) ಅನುನಾಸಿಕ ಅಕ್ಷರ (1) |

2. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ವಾಕ್ಯ ಪೂರ್ತಿ ಮಾಡಿ ಬರೆಯಿರಿ : (4×1=4)

   1) ನಾಮಪದಕ್ಕೆ ಬದಲಾಗಿ ಬಳಸುವ ಬೇರೊಂದು ಪದವನ್ನು ________ ಎನ್ನುತ್ತಾರೆ.
   (ರೂಢನಾಮ, ಅಂಕಿತನಾಮ, ಸರ್ವನಾಮ, ಅನ್ವರ್ಥನಾಮ)

   2) ಸಂಧಿಕಾರ್ಯ ಮಾಡುವಾಗ ಪೂರ್ವಪದದ ಕೊನೆಯ ಸ್ವರ ಮತ್ತು ಉತ್ತರಪದದ ಮೊದಲ ಸ್ವರಾಕ್ಷರದ ನಡುವೆ ಹೊಸ ಅಕ್ಷರ ಬರುವುದಕ್ಕೆ ________ ಸಂಧಿ ಎನ್ನುವರು.
   (ಲೋಪ, ಆಗಮ, ಗುಣ, ಆದೇಶ)

   3) ಎರಡು ತುಟಿಗಳ ನೆರವಿನಿಂದ ಉಚ್ಚಾರಗೊಳ್ಳುವ ಅಕ್ಷರಗಳನ್ನು ________ ಎಂದು ಕರೆಯುತ್ತಾರೆ.
   (ದಂತ್ಯ, ಕಂಠ್ಯ, ಅನುನಾಸಿಕ, ಓಷ್ಠ್ಯ)

   4) ಬೇರೆಯವರ ಮಾತನ್ನು ಪುನರುಚ್ಚರಿಸುವಾಗ ________ ಚಿಹ್ನೆ ಬಳಸುತ್ತಾರೆ.
   (ಪೂರ್ಣವಿರಾಮ, ಅಲ್ಪವಿರಾಮ, ಉದ್ಧರಣಾ ಚಿಹ್ನೆ, ಪ್ರಶ್ನಾರ್ಥಕ)

SEAL

(4×1=4)

3. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.
   1) ಅರ್ಥಕ್ಕೆ ಅನುಗುಣ (ಅನ್ವಯ) ವಾಗಿ ಹೊಂದಿಕೊಂಡು ಬರುವ ನಾಮಪದಗಳನ್ನು ________ ಗಳೆಂದು ಕರೆಯುತ್ತಾರೆ.
   2) ಒಂದು ವಾಕ್ಯದಲ್ಲಿ ಕರ್ಮಪದದ ನೆರವಿಲ್ಲದೆಯೆ ಪೂರ್ಣಾರ್ಥವನ್ನು ಕೊಡುವ ಕ್ರಿಯಾಪದಕ್ಕೆ ________ ಎನ್ನುತ್ತೇವೆ.
   3) ಒಂದು ಪ್ರಧಾನ ವಾಕ್ಯಕ್ಕೆ ಒಂದು ಅಥವಾ ಅನೇಕ ವಾಕ್ಯಗಳು ಅಧೀನಗಳಾಗಿದ್ದರೆ ಅದು ________ ವಾಕ್ಯ ಎನಿಸುತ್ತದೆ.
   4) ಕ್ರಿಯೆಯು ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂಬರ್ಥದಲ್ಲಿ ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿದಾಗ ________ ಕ್ರಿಯಾಪದಗಳಾಗುತ್ತವೆ.

4. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ : (4×1=4)
   1) ದಬದಬ : ಅನುಕರಣಾವ್ಯಯ :: ಬೇಗಬೇಗ :
   2) ದಿಗಂತ : ದಿಕ್ + ಅಂತ :: ಲೋಕೈಕ :
   3) ಗೆ, ಕ್ಕೆ, ಇಗೆ : ಚತುರ್ಥಿ :: ದೆಸೆಯಿಂದ :
   4). ಬಡತನ : ಸಿರಿತನ :: ಉತ್ಸಾಹ :

5. ಈ ಕೆಳಗಿನ ಪ್ರಶ್ನೆಗಳಿಗೆ ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿ : (4×1=4)
   1) ಹಾಡುಗಾರ ಇಂಪಾಗಿ ಹಾಡಿದನು.
      (ಸ್ತ್ರೀಲಿಂಗಕ್ಕೆ ಬದಲಿಸಿ)
   2) ಇವರು ನನ್ನ ಮಕ್ಕಳು ತಬ್ಬಲಿಗಳು ಎಂದು ಸಾಹೇಬರಿಗೆ ಏಕೆ ತಿಳಿಸಲಿಲ್ಲ
      (ಈ ವಾಕ್ಯವನ್ನು ಬರೆದುಕೊಂಡು ಸೂಕ್ತಲೇಖನ ಚಿಹ್ನೆ ಹಾಕಿರಿ)
   3) ಹಕ್ಕಿಗಳು ಮರದಲ್ಲಿ ಚಿಲಿಪಿಲಿಗುಟ್ಟುತ್ತಿವೆ.
      (ಏಕವಚನಕ್ಕೆ ಬದಲಿಸಿ)
   4) ಕಾರ್ಮಿಕರು ಕೆಲಸಕ್ಕೆ ಹಾಜರಾದರು.
      (ಈ ವಾಕ್ಯದಲ್ಲಿರುವ ಕರ್ತೃಪದವನ್ನು ಗುರುತಿಸಿ ಬರೆಯಿರಿ)

6. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ : (4×1=4)

ಪ್ರಪಂಚ ಸುಖ-ದುಃಖಗಳ ಆಗರ. ಕೇವಲ ಸುಖ, ಕೇವಲ ದುಃಖ ಯಾವ ಪ್ರಾಣಿ ಜೀವನದಲ್ಲಿಯೂ ಇಲ್ಲ. ಸುಖ-ದುಃಖಗಳಿಗೆ ಮನವೇ ಮೂಲ. ನಗೆ ವಿಶ್ವವ್ಯಾಪಕ. ಅದು ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳಲ್ಲೆಲ್ಲಾ ಹಬ್ಬಿಕೊಂಡಿದೆ. ಸ್ಥೂಲವಾಗಿ ನಗೆಯನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಮೆಚ್ಚುನಗೆ ಮತ್ತು ಚುಚ್ಚುನಗೆ. ನಗು ಆನಂದದ ಕುರುಹು; ಅಳು ದುಃಖದ ಚಿಹ್ನೆ. ನಗು ಎಲ್ಲರಿಗೂ ಬೇಕು. ಅಳು ಯಾರಿಗೂ ಬೇಡ. ಆದರೆ ಅವು ಯಾವ ಹತೋಟಿಗೆ ಸಿಗದೆ ತಮ್ಮಷ್ಟಕ್ಕೆ ತಾವೇ ಸ್ವತಂತ್ರವಾಗಿವೆ. ನಗು ಬಂದಾಗ ನಾವು ನಗಬೇಕು ; ಅಳು ಬಂದಾಗ ಅಳಬೇಕು. ನಗು ಅಳು ಬಾರದೆ ನಾವು ನಗಲು ಅಳಲು ಪ್ರಯತ್ನಿಸಿದರೆ ಅದು ಕೃತಕವಾಗಿ ತೋರಿ ಅನ್ಯರನ್ನು ನಗಿಸುತ್ತದೆ. ಮನದಲ್ಲಿ ಭಾವನೆಗಳು ಮೂಡಿ ನಿಂತಾಗ ನಗು-ಅಳು ಜನಿಸುತ್ತವೆ. ಚಿತ್ತವೃತ್ತಿಯಲ್ಲಿ ಹಾಸ್ಯಭಾವ ಮೂಡಿದರೆ ನಗು; ಕ್ಲೇಶಭಾವ ಮೂಡಿದರೆ ಅಳು. ಅಳುವಿನಿಂದ ನಗೆ, ನಗೆಯಿಂದ ಅಳು ಹುಟ್ಟಲಾರವು. ಅವೆರಡೂ ಪರಸ್ಪರ ವಿರುದ್ಧವಾದುವು. ಜೀವನ ಒಂದು ರೀತಿ ಇವೆರಡರ ಬೆರಕೆಯಾಗಿದೆ.

ಪ್ರಶ್ನೆಗಳು:

1) ಸುಖ-ದುಃಖಗಳಿಗೆ ಮೂಲ ಯಾವುದು?
2) ವಿಶ್ವವ್ಯಾಪಕ ನಗೆ ಎಲ್ಲೆಲ್ಲಿ ಹಬ್ಬಿಕೊಂಡಿದೆ?
3) ನಗೆಯ ಮುಖ್ಯ ಪ್ರಕಾರಗಳು ಯಾವುವು?
4) ನಗು-ಅಳು ಹೇಗೆ ಜನಿಸುತ್ತವೆ?

7. ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ಆರಿಸಿಕೊಂಡು ಹತ್ತು ವಾಕ್ಯಗಳಿಗೆ ಮೀರದಂತೆ ವಿಸ್ತರಿಸಿ ಬರೆಯಿರಿ: (1×6=6)

1) ಹಾಸಿಗೆ ಇದ್ದಷ್ಟು ಕಾಲು ಚಾಚು
2) ದೂರದ ಬೆಟ್ಟ ನುಣ್ಣಗೆ
3) ಮಾಡಿದ್ದುಣ್ಣೋ ಮಹರಾಯ.

8. ನಿಮ್ಮ ಪ್ರದೇಶದ ಬರಗಾಲವನ್ನು ವಿವರಿಸಿ ಜಿಲ್ಲಾಧಿಕಾರಿಗಳಿಗೆ ಬರ ಪರಿಹಾರ ಕಾರ್ಯ ಕೈಗೊಳ್ಳಲು ಒಂದು ಮನವಿ ಪತ್ರ ಬರೆಯಿರಿ. (1×5=5)

9. ಈ ಕೆಳಗಿನ ಗದ್ಯಭಾಗವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ ಬರೆಯಿರಿ. (1×15=15)

ಹಲವು ವರ್ಷಗಳ ಹಿಂದೆ ಒಂದು ಹಳ್ಳಿಯ ಹೊರಭಾಗದಲ್ಲಿ ಒಂದು ಹಸಿರು ಮರವಿತ್ತು. ಅದು ಸದಾಕಾಲ ಹಸಿರಾಗಿಯೇ ಇರುತ್ತಿತ್ತು. ಅದರಲ್ಲಿ ಹೂವಾಗಲೀ, ಕಾಯಾಗಲೀ ಆಗಿದ್ದನ್ನು ಜನ ಕಂಡಿರಲಿಲ್ಲ. ಅದರ ಮಹತ್ವವೂ ಅವರಿಗೆ ಗೊತ್ತಿರಲಿಲ್ಲ. ಒಂದು ದಿನ ಗಾಯಗೊಂಡಿದ್ದ ವ್ಯಕ್ತಿ ಆ ಮರದ ನೆರಳಿನಲ್ಲಿ ಕುಳಿತಿದ್ದಾಗ ಮರದ ಟೊಂಗೆಯೊಂದು ಗಾಳಿಗೆ ಮುರಿದು ಬಿತ್ತು. ಆ ವ್ಯಕ್ತಿ ಎಲೆ ಕಿತ್ತುಕೊಂಡು ಗಾಯಕ್ಕೆ ತಿಕ್ಕಿಕೊಂಡ. ನಂತರ ನೋವು ಕಡಿಮೆಯಾಯಿತು. ಇದರಿಂದ ಮನೆಗೆ ಹೋಗುವಾಗ ಸ್ವಲ್ಪ ಎಲೆ ಕಿತ್ತುಕೊಂಡ. ದಿನಾ ಅದನ್ನೇ ಹಚ್ಚತ್ತೊಡಗಿದ. ನಾಲ್ಕೈದು ದಿನಗಳೊಳಗೆ ಅವನ ಗಾಯ ವಾಸಿಯಾಯಿತು. ತನ್ನ ಸಂತೋಷ, ವಿಸ್ಮಯವನ್ನು ಹಳ್ಳಿಗೆಲ್ಲಾ ಸಾರಿದನು. ನಂತರ ಅದರ ಎಲೆ ಉಪಯೋಗಿಸಿದವರಿಗೆ ಎಲ್ಲಾ ಕಾಯಿಲೆಗಳು ಗುಣವಾಯಿತು. ಎಲ್ಲರಿಗೂ ಆ ಮರ ವರವಾಯಿತು.

10. ಕೆಳಗಿನ ಇಂಗ್ಲೀಷ್ ಗದ್ಯಭಾಗವನ್ನು ಕನ್ನಡ ಭಾಷೆಗೆ ಅನುವಾದ ಮಾಡಿ ಬರೆಯಿರಿ: (1×15=15)

On a big tree in a forest lived a wise crow. All the other birds loved the crow. One day the crow saw a hunter spreading a net with grains over it. He flew around warning the other birds "the trap". Seeing the grains, a flock of white doves from far away came flapping down on the net. Soon the doves realised that they were trapped.

The hunter saw this, he ran gleefully to catch the poor birds. The wise crow saw this and wanted to save the doves. "Flap your wings all at the same time. Then you will be able to fly with the net". All the doves flapped their wings at the same time. Soon they were flying safely up in the sky.

Moral : There is a great strength in unity.

11. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರು ಒಂದನ್ನು ಆರಿಸಿಕೊಂಡು ಎರಡು ಪುಟಕ್ಕೆ ಮೀರದಂತೆ ಪ್ರಬಂಧ ಬರೆಯಿರಿ. (1×10=10)

1) ನಮ್ಮ ಪರಿಸರ
2) ಬಾಹ್ಯಾಕಾಶ ವಿಜ್ಞಾನ.

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

7049 2015 (2)

# ಕನ್ನಡ ಭಾಷೆ (ಪತ್ರಿಕೆ – 2)

(ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್. ಅಧಿಕಾರಿಗಳಿಗೆ ಮಾತ್ರ) (ಪಠ್ಯಪುಸ್ತಕ ರಹಿತ)

# KANNADA LANGUAGE (PAPER – 2)

(I.A.S., I.P.S. and I.F.S. Officers Only) (Without Text Books)

| ಸಂವೀಕ್ಷಕರ ಸಹಿ<br>Invigilator's Signature | ಪ್ರಶ್ನೆ ಸಹಿತ ಉತ್ತರ ಪತ್ರಿಕೆಯ ಸಂಖ್ಯೆ<br>Question Cum Answer Booklet No. | ಬಾರ್‌ಕೋಡ್‌ಗಳನ್ನು ಯಾವುದೇ ರೀತಿಯಲ್ಲಿ ಹಾಳು ಮಾಡಬಾರದು<br>Do not tamper or damage the bar codes |
|---|---|---|
| | | |

Reg. No./ನೋಂದಣಿ ಸಂಖ್ಯೆ :

ಗರಿಷ್ಠ ಸಮಯ/Max. Time : 3 ಘಂಟೆಗಳು

ಗರಿಷ್ಠ ಅಂಕಗಳು/Max. Marks : 75

7049 2015 (2)

## ಅಭ್ಯರ್ಥಿಗಳಿಗೆ ಸೂಚನೆಗಳು/Instructions to Candidates

1. ಈ ಪುಟದ ಮೇಲ್ಭಾಗದಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರಿಜಿಸ್ಟರ್ ನಂಬರನ್ನು ಬರೆಯಿರಿ.
2. ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯ ಯಾವುದೇ ಇತರ ಪುಟದಲ್ಲಿ ನಿಮ್ಮ ಹೆಸರು ಅಥವಾ ರಿಜಿಸ್ಟರ್ ನಂಬರನ್ನು ಬರೆಯಬೇಡಿ.
3. ಕಪ್ಪು ಅಥವಾ ನೀಲಿ ಪೆನ್ನನ್ನು ಉಪಯೋಗಿಸಿ ನಿಮ್ಮ ಉತ್ತರವನ್ನು ಬರೆಯಿರಿ.
4. ಎಲ್ಲಾ ಪ್ರಶ್ನೆಗಳಿಗೆ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯಲ್ಲಿ ಒದಗಿಸಿದ ಸ್ಥಳದಲ್ಲೇ ಉತ್ತರ ಬರೆಯಿರಿ. ಉತ್ತರಕ್ಕಾಗಿ ಹೆಚ್ಚುವರಿ ಹಾಳೆಯನ್ನು ಒದಗಿಸಲಾಗುವುದಿಲ್ಲ.
5. ಪರೀಕ್ಷಾ ಕೊಠಡಿಯನ್ನು ಬಿಡುವ ಮೊದಲು ನಿಮ್ಮ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಸ್ವತಃ ನೀವೇ ಸಂವೀಕ್ಷಕರಿಗೆ ಒಪ್ಪಿಸತಕ್ಕದ್ದು.
6. ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಉತ್ತರ ಪತ್ರಿಕೆಯನ್ನು ರದ್ದುಗೊಳಿಸಲಾಗುವುದು.

1. Write your Reg. No. in the space provided above.
2. Do not write your Name or Reg. No. on any other page of the Question Cum Answer Booklet.
3. Write your answer using Blue or Black pen.
4. **Write answers for all questions in the space provided. No additional sheet will be provided.**
5. Handover your Question Paper Cum Answer Booklet personally to the invigilator before you leave the examination hall.
6. Failure to adhere to any of the above mentioned instructions will render the paper liable for rejection.

Do not tamper or damage the bar codes

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಕ್ಯಾಲ್ಕುಲೇಟರ್‌ಗಳನ್ನು ಅಥವಾ ಇತರ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಆವರಣಗಳಲ್ಲಿ ತರುವುದನ್ನು ನಿಷೇಧಿಸಲಾಗಿದೆ.**

**Use of mobile phones, calculators or any other electronic gadgets is prohibited inside the examination venue/center.**

ಸೂಚನೆ: ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.

**'ಅ' ಪಟ್ಟಿಯಲ್ಲಿರುವ ಪದಗಳನ್ನು 'ಬ' ಪಟ್ಟಿಯಲ್ಲಿರುವ ಸೂಕ್ತ ಪದಗಳೊಂದಿಗೆ ಹೊಂದಿಸಿ ಬರೆಯಿರಿ :** **(4×1=4)**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ಅಲ್ಲಿ | ಅ) ವೃದ್ಧಿಸಂಧಿ |
| 2. ಅಮೃತ | ಆ) ಅನುಕರಣಾವ್ಯಯ |
| 3. ಫಳಫಳ | ಇ) ಸಪ್ತಮೀ ವಿಭಕ್ತಿ |
| 4. ಏಕೈಕ | ಈ) ಆದೇಶ ಸಂಧಿ |
| | ಉ) ಅಮರ್ದು |

ಉತ್ತರ :

1. ________________

2. ________________

3. ________________

4. ________________

**ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ವಾಕ್ಯವನ್ನು ಪೂರ್ತಿ ಮಾಡಿ ಬರೆಯಿರಿ :** **(4×1=4)**

5. ಮಕ್ಕಳು ಹಾಲನ್ನು ಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನುತ್ತಾರೆ. ಈ ವಾಕ್ಯವು ________

(ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ, ಮಿಶ್ರವಾಕ್ಯ, ವಿಶೇಷವಾಕ್ಯ)

ಉತ್ತರ: ________________

6. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

(ಅಲ್ಪವಿರಾಮ, ಪ್ರಶ್ನಾರ್ಥಕ, ಆವರಣ ಚಿಹ್ನೆ, ವಿವರಣಾತ್ಮಕ ಚಿಹ್ನೆ)

ಉತ್ತರ: ________________

7. ರಾಮನು ಅವನು ಹೇಳಿದ ಮಾತನ್ನೇ ಮರೆತುಬಿಟ್ಟನು. ಈ ವಾಕ್ಯದಲ್ಲಿರುವ ಸರ್ವನಾಮ ಪದ.

(ಮರೆತು ಬಿಟ್ಟನು, ರಾಮನು, ಅವನು, ಹೇಳಿದ)

ಉತ್ತರ: ____________________

8. ಸ್ವತಂತ್ರವಾಗಿ ಇನ್ನೊಂದರ ಸಹಾಯವಿಲ್ಲದೆ ಉಚ್ಚರಿಸುವ ವರ್ಣಗಳಿಗೆ ಹೀಗೆಂದು ಕರೆಯುತ್ತಾರೆ.

ಉತ್ತರ: ____________________

**ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : (4×1=4)**

9. ಪತ್ರದ ಮುಕ್ತಾಯದಲ್ಲಿ ತಂದೆ, ತಾಯಿ ಮತ್ತು ಹಿರಿಯರಿಗೆ ಬರೆಯುವ ಗೌರವ ಸಂಬೋಧನೆ ________

ಉತ್ತರ: ____________________

10. 'ಮೈದೋರು' ಈ ಪದವು ________ ಸಂಧಿಗೆ ಉದಾಹರಣೆಯಾಗಿದೆ.

ಉತ್ತರ: ____________________

11. 'ವಾಕ್ + ದೇವಿ' ಇದನ್ನು ಸೇರಿಸಿದರೆ ________ ಆಗುತ್ತದೆ.

ಉತ್ತರ: ____________________

12. 'ಅಭಿಮಾನ' ಪದದ ವಿರುದ್ಧ ಪದ ________

ಉತ್ತರ: ____________________

**ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಇರುವ ಸಂಬಂಧದ ಪದ ಬರೆಯಿರಿ : (4×1=4)**

13. ಪತ್ತಣ : ಪಟ್ಟಣ : : ಕಾರ್ಯ :

ಉತ್ತರ: ____________________

14. ಶಸ್ತ್ರ : ಆಯುಧ : : ಅಸಂಖ್ಯಾತ :

ಉತ್ತರ: ______________________________

15. ಸಹದೇವ : ಅಂಕಿತನಾಮ : : ಮೂಗ :

ಉತ್ತರ: ______________________________

16. ಮ್ : ಅನುನಾಸಿಕ : : ಥ್ :

ಉತ್ತರ: ______________________________

ಈ ಕೆಳಗಿನ ಪ್ರಶ್ನೆಗಳಿಗೆ ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿರಿ : **(4×1=4)**

17. ತಂಗಿ ನಾನು ಹೇಳಿದುದು ನಿಜವೆಂದು ಬಗೆದೆಯಾ ನನ್ನ ಹೃದಯವನ್ನು ನೀನರಿಯೆಯಾ

(ಈ ವಾಕ್ಯವನ್ನು ಬರೆದುಕೊಂಡು ಸೂಕ್ತಲೇಖನ ಚಿಹ್ನೆ ಹಾಕಿರಿ)

ಉತ್ತರ: ______________________________

18. ರಾಮನು ಲಕ್ಷ್ಮಣನೊಂದಿಗೆ ಕಾಡಿಗೆ ಹೋದನು.

(ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಿಸಿ ಬರೆಯಿರಿ)

ಉತ್ತರ: ______________________________

19. ಭಾರತವು ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಕೊನೆಕೊನೆಗೆ ಜಯದ ದಡ ಸೇರಿತು.

(ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ)

ಉತ್ತರ: ______________________________

20. ಮಗುವು ದಿನನಿತ್ಯವೂ ಆಟದಲ್ಲೇ ಹೆಚ್ಚಿನ ಸಮಯ ಕಳೆಯುವುದು.

(ಈ ವಾಕ್ಯವನ್ನು ಬಹುವಚನಕ್ಕೆ ಬದಲಿಸಿ ಬರೆಯಿರಿ)

ಉತ್ತರ: ______________________________

**ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :** **(4×1=4)**

ಸ್ವತಂತ್ರ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ವಿಶ್ವೇಶ್ವರಯ್ಯ ಅವರು ವೈಜ್ಞಾನಿಕ ಅನ್ವೇಷಣೆಗಾಗಿ ಸ್ವಂತ ಖರ್ಚಿನಲ್ಲಿ ಜಪಾನ್, ಯುರೋಪ್ ಮತ್ತು ಅಮೇರಿಕ ದೇಶಗಳಿಗೆ ಭೇಟಿ ನೀಡಿದರು. ಪುಟಿಯುವ ಚೈತನ್ಯ , ನಾಳೆ ಮಾಡುವುದನ್ನು ಇಂದೇ ಮಾಡು, ಇಂದು ಮಾಡುವುದನ್ನು ಈಗಲೇ ಮಾಡಬೇಕೆಂಬ ತುಡಿತ ಅವರದಾಗಿತ್ತು. ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೆ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

**ಪ್ರಶ್ನೆಗಳು:**

21. ಹೈದರಾಬಾದ್ ನಗರ ಭಾರತದ ಸುಯೋಜಿತ ನಗರ ಸಾಲಿಗೆ ಸೇರಲು ಕಾರಣವೇನು ?

ಉತ್ತರ: ______________________________

______________________________

______________________________

22. ವಿಶ್ವೇಶ್ವರಯ್ಯನವರು ಯಾವ ಉದ್ದೇಶಕ್ಕಾಗಿ ವಿದೇಶಿ ಪ್ರವಾಸ ಮಾಡಿದರು ?

ಉತ್ತರ: ______________________________

______________________________

______________________________

23. ಹೈದರಾಬಾದ್ ನಗರದಲ್ಲಿ ಉಂಟಾಗುತ್ತಿದ್ದ ಪ್ರವಾಹಕ್ಕೆ ಕಾರಣವೇನು ?

ಉತ್ತರ: ______________________________

______________________________

______________________________

24. ವಿಶ್ವೇಶ್ವರಯ್ಯನವರು ಎಂತಹ ತುಡಿತವನ್ನು ಹೊಂದಿದ್ದರು ?

ಉತ್ತರ: ______________________________

______________________________

______________________________

ಈ ಕೆಳಗಿನ ಗಾದೆ ಮಾತನ್ನು ಹತ್ತು ವಾಕ್ಯಗಳಿಗೆ ಮೀರದಂತೆ ವಿಸ್ತರಿಸಿ ಬರೆಯಿರಿ : (1×6=6)

25. ತುಂಬಿದ ಕೊಡ ತುಳುಕುವುದಿಲ್ಲ.

**ಅಥವಾ**

ಬೆಳ್ಳಗಿರುವುದೆಲ್ಲಾ ಹಾಲಲ್ಲ.

**ಅಥವಾ**

ತಾಳಿದವನು ಬಾಳಿಯಾನು.

ಉತ್ತರ : ____________________

26. ನೀವು ವಾಸಿಸುವ ನಗರ ಪ್ರದೇಶದ ರಸ್ತೆ ದುರಸ್ತಿಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ: **(1×5=5)**

ಉತ್ತರ:

**ಈ ಕೆಳಗಿನ ಗದ್ಯಭಾಗವನ್ನು ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದಿಸಿರಿ :** **(1×15=15)**

27. ನಾನು ಮಿನಿಪೋಲೀಸ್ ನಗರಕ್ಕೆ ಒಬ್ಬ ಮಿತ್ರರನ್ನು ನೋಡಲು ಹೋಗಿದ್ದಾಗ ಒಂದು ರಾತ್ರಿ ಅಮೇರಿಕನ್ ಲಾಕಪ್‌ನಲ್ಲಿರಬೇಕಾಯಿತು. ನಾನು ನೋಡಲು ಹೋದವರು ಇರಲಿಲ್ಲ, ಅವರ ಪರಿಚಿತರೊಬ್ಬರು ಸಿಕ್ಕಿ ನನ್ನನ್ನು ಮೋಟಾರಿನಲ್ಲಿ ಕೂರಿಸಿಕೊಂಡು ತಮ್ಮ ಕೆಲಸದ ಮೇಲೆ ಹೊರಟಾಗ, ನಾನು ದಾರಿಯಲ್ಲಿ ಒಂದೆಡೆ ಕಾರಿನಿಂದ ಇಳಿದು

ಅವರು ಅದೇ ದಾರಿಯಲ್ಲಿ ಹಿಂದಿರುಗುವಾಗ ರಾತ್ರಿ 2 ಗಂಟೆಗೆ ನನ್ನನ್ನು ಕರೆದುಕೊಂಡು ಹೋಗಬೇಕೆಂದು ಹೇಳಿದ್ದ. ದೀಪ ಹೊತ್ತಿದ ಮೇಲೆ ನಾನು ನಗರದಲ್ಲಿ ಅಲ್ಲಲ್ಲಿ ಸುತ್ತುತ್ತಾ ನನಗೇ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲ ನೋಡುತ್ತ ಮಿತ್ರರು ಬಂದು ನನ್ನನ್ನು ಕರೆದುಕೊಂಡು ಹೋಗಲು ಗೊತ್ತು ಮಾಡಿಕೊಂಡಿದ್ದ ಸ್ಥಳವನ್ನು ಬಿಟ್ಟು ಆಚೆ, ಈಚೆ ಹೊರಟುಹೋದೆ. ಅನಂತರ ಏನು ಮಾಡಿದರೂ ನನ್ನ ಸ್ಥಳ ಸಿಕ್ಕಲಿಲ್ಲ. ಹೀಗೆ ತಿರುಗಾಟದಲ್ಲಿ ರಾತ್ರಿ 9 ಗಂಟೆ ಆಗಿ ಹೋಯಿತು.

ಉತ್ತರ: ____________________________________________

ಈ ಕೆಳಗಿನ ಗದ್ಯ ಭಾಗವನ್ನು ಇಂಗ್ಲೀಷ್‌ನಿಂದ ಕನ್ನಡ ಭಾಷೆಗೆ ಅನುವಾದಿಸಿರಿ. **(1×15=15)**

28. After his M.A., Raman wanted to go to the United Kingdom for higher studies in science. But his health broke down again, and he could not go. This was the greatest disappointment in his life. His relatives asked him to give up his study of science, and take a competitive examination in Calcutta, in History and Economics. Raman did so, and got along well with his new subjects. He got the first place in the competitive examinations, and was appointed Deputy Accountant General in 1907, at Calcutta. His relatives perhaps felt happy to see that Raman had settled down well in life. But Raman was not happy. How could a scientist like Raman put up with the life of a Deputy Accountant General ? He felt like a fish out of water in his new post. But he still had hopes of becoming a scientist and was waiting for an opportunity.

ಉತ್ತರ: ______________________________

**ಈ ಕೆಳಗಿನ ವಿಷಯದ ಬಗ್ಗೆ (2 ಪುಟಗಳಿಗೆ ಮೀರದಂತೆ) ಪ್ರಬಂಧವನ್ನು ಬರೆಯಿರಿ.** **(1×10=10)**

29. ರೈತರ ಆತ್ಮಹತ್ಯೆ

**ಅಥವಾ**

ಮಹಿಳಾ ವಿದ್ಯಾಭ್ಯಾಸ

ಉತ್ತರ:

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

**7049 2015 (1)**

**ಕನ್ನಡ ಭಾಷೆ (ಪತ್ರಿಕೆ – 2)**

**(ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್. ಅಧಿಕಾರಿಗಳಿಗೆ ಮಾತ್ರ) (ಪಠ್ಯಪುಸ್ತಕ ರಹಿತ)**

**KANNADA LANGUAGE (PAPER – 2)**

**(I.A.S., I.P.S. and I.F.S. Officers Only) (Without Text Books)**

| ಸಂವೀಕ್ಷಕರ ಸಹಿ<br>**Invigilator's Signature** | ಪ್ರಶ್ನೆ ಸಹಿತ ಉತ್ತರ ಪತ್ರಿಕೆಯ ಸಂಖ್ಯೆ<br>**Question Cum Answer Booklet No.** | ಬಾರ್ ಕೋಡ್‌ಗಳನ್ನು ಯಾವುದೇ ರೀತಿಯಲ್ಲಿ ಹಾಳು ಮಾಡಬಾರದು<br>**Do not tamper or damage the bar codes** |
|---|---|---|
| | | |

Reg. No./ನೋಂದಣಿ ಸಂಖ್ಯೆ :

**ಗರಿಷ್ಠ ಸಮಯ/Max. Time : 3 ಘಂಟೆಗಳು**

**ಗರಿಷ್ಠ ಅಂಕಗಳು/Max. Marks : 75**

**7049 2015 (1)**

SEAL

## ಅಭ್ಯರ್ಥಿಗಳಿಗೆ ಸೂಚನೆಗಳು/Instructions to Candidates

1. ಈ ಪುಟದ ಮೇಲ್ಭಾಗದಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರಿಜಿಸ್ಟರ್ ನಂಬರನ್ನು ಬರೆಯಿರಿ.
2. ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯ ಯಾವುದೇ ಇತರ ಪುಟದಲ್ಲಿ ನಿಮ್ಮ ಹೆಸರು ಅಥವಾ ರಿಜಿಸ್ಟರ್ ನಂಬರನ್ನು ಬರೆಯಬೇಡಿ.
3. ಕಪ್ಪು ಅಥವಾ ನೀಲಿ ಪೆನ್ನನ್ನು ಉಪಯೋಗಿಸಿ ನಿಮ್ಮ ಉತ್ತರವನ್ನು ಬರೆಯಿರಿ.
4. **ಎಲ್ಲಾ ಪ್ರಶ್ನೆಗಳಿಗೆ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯಲ್ಲಿ ಒದಗಿಸಿದ ಸ್ಥಳದಲ್ಲೇ ಉತ್ತರ ಬರೆಯಿರಿ. ಉತ್ತರಕ್ಕಾಗಿ ಹೆಚ್ಚುವರಿ ಹಾಳೆಯನ್ನು ಒದಗಿಸಲಾಗುವುದಿಲ್ಲ.**
5. ಪರೀಕ್ಷಾ ಕೊಠಡಿಯನ್ನು ಬಿಡುವ ಮೊದಲು ನಿಮ್ಮ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಸ್ವತಃ ನೀವೇ ಸಂವೀಕ್ಷಕರಿಗೆ ಒಪ್ಪಿಸತಕ್ಕದ್ದು.
6. ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಉತ್ತರ ಪತ್ರಿಕೆಯನ್ನು ರದ್ದುಗೊಳಿಸಲಾಗುವುದು.

1. Write your Reg. No. in the space provided above.
2. Do not write your Name or Reg. No. on any other page of the Question Cum Answer Booklet.
3. Write your answer using Blue or Black pen.
4. **Write answers for all questions in the space provided. No additional sheet will be provided.**
5. Handover your Question Paper Cum Answer Booklet personally to the invigilator before you leave the examination hall.
6. Failure to adhere to any of the above mentioned instructions will render the paper liable for rejection.

**Do not tamper or damage the bar codes**

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಕ್ಯಾಲ್ಕುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಆವರಣಗಳಲ್ಲಿ ತರುವುದನ್ನು ನಿಷೇಧಿಸಲಾಗಿದೆ.**

**Use of mobile phones, calculators or any other electronic gadgets is prohibited inside the examination venue/center.**

ಸೂಚನೆ : ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.

**'ಅ' ಪಟ್ಟಿಯಲ್ಲಿರುವ ಪದಗಳನ್ನು 'ಬ' ಪಟ್ಟಿಯಲ್ಲಿರುವ ಸೂಕ್ತ ಪದಗಳೊಂದಿಗೆ ಹೊಂದಿಸಿ ಬರೆಯಿರಿ :** (1×4=4)

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ಅನುನಾಸಿಕಾಕ್ಷರಗಳು | ಅ) ದಕ್ಷಿಣ |
| 2. ದೀರ್ಘ ಸ್ವರಗಳು | ಆ) ಒಂದೆರಡು |
| 3. ದಿಗ್ವಾಚಕ | ಇ) ಎರಡು ಮಾತ್ರಾಕಾಲ |
| 4. ಲೋಪಸಂಧಿ | ಈ) ವರ್ಗದ ಕೊನೆಯ ಅಕ್ಷರಗಳು |
| | ಉ) ಮಳೆಗಾಲ |

ಉತ್ತರ :

1. ______________________________

2. ______________________________

3. ______________________________

4. ______________________________

**ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ವಾಕ್ಯವನ್ನು ಪೂರ್ತಿ ಮಾಡಿ ಬರೆಯಿರಿ :** (1×4=4)

5. ಸಂಯುಕ್ತಾಕ್ಷರವನ್ನು ರೂಢಿಯಲ್ಲಿ ______________ ಎನ್ನುವರು.

(ಕಾಗುಣಿತ, ಒತ್ತಕ್ಷರ, ವರ್ಣಮಾಲೆ, ಸರ್ವನಾಮ)

ಉತ್ತರ: ______________________________

6. ನಗುನಗುತ ಕೂಡಿ ಬಾಳಿದರೆ ಸ್ವರ್ಗ ಸುಖ. – ಈ ವಾಕ್ಯದಲ್ಲಿ ನಗುನಗುತ ಎನ್ನುವುದು ______________ ವ್ಯಾಕರಣಾಂಶಕ್ಕೆ ಉದಾಹರಣೆ.

(ಅನುಕರಣಾವ್ಯಯ, ಜೋಡುನುಡಿ, ನುಡಿಗಟ್ಟು, ದ್ವಿರುಕ್ತಿ,)

ಉತ್ತರ: ______________________________

7. 'ಎಲ್ಲಿಂದ ಅಷ್ಟೊಂದು ಹಣ ತರೋದು ಹೇಳು' – ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ ________ .

(ಪ್ರಶ್ನಾರ್ಥಕ , ಅಲ್ಪವಿರಾಮ, ಆಶ್ಚರ್ಯ ಸೂಚಕ, ಪೂರ್ಣವಿರಾಮ)

ಉತ್ತರ: ________

8. ಅನುಸ್ವಾರ–ವಿಸರ್ಗಗಳನ್ನು________ ಎನ್ನುವರು.

(ಸ್ವರಗಳು, ವ್ಯಂಜನಗಳು, ಅನುನಾಸಿಕಗಳು, ಯೋಗವಾಹಗಳು)

ಉತ್ತರ: ________

**ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : (1×4=4)**

9. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು ________

ಉತ್ತರ: 49

10. 'ಬೆಟ್ಟ+ ತಾವರೆ ' ಇದನ್ನು ಕೂಡಿಸಿ ಬರೆದಾಗ ಆಗುವ ರೂಪ ________

ಉತ್ತರ: ________

11. 'ರಾಮನಲ್ಲಿ' ಈ ಪದದಲ್ಲಿರುವ ವಿಭಕ್ತಿ ________

ಉತ್ತರ: ________

12. ಅರ್ಥಕ್ಕೆ ಅನುಗುಣವಾಗಿ ಕರೆಯುವ ಹೆಸರುಗಳಿಗೆ________ ನಾಮ ಎನ್ನುವರು.

ಉತ್ತರ: ________

**ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕೆ ಇರುವ ಸಂಬಂಧದ ಪದವನ್ನು ಬರೆಯಿರಿ : (1×4=4)**

13. ಆಕಾಶ : ಆಗಸ : : ಆಶ್ಚರ್ಯ :

ಉತ್ತರ: ________

14. ಧರ್ಮರಾಯ : ನಾಮಪದ : : ಹಾಡುವರು :

ಉತ್ತರ: ______________________________

15. ಪ್ರತ್ಯಕ್ಷ : ಪರೋಕ್ಷ : : ಅನುಕೂಲ :

ಉತ್ತರ: ______________________________

16. ಸ್ನೇಹಿತ : ಸ್ನೇಹಿತರು : : ಅಕ್ಕ :

ಉತ್ತರ: ______________________________

**ಈ ಕೆಳಗಿನ ಪ್ರಶ್ನೆಗಳಿಗೆ ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿರಿ :** **(1×4=4)**

17. ಮಳೆಯಿಂದಾಗಿ ಹಳ್ಳಕೊಳ್ಳಗಳಿಂದ ನೀರು ಜುಳಜುಳನೆ ಹರಿಯಿತು.

(ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದವನ್ನು ಗುರುತಿಸಿ ಬರೆಯಿರಿ)

ಉತ್ತರ: ______________________________

18. ರಾಮನು ಕಾಡಿಗೆ ಹೋದನು. ಅವನ ಸಂಗಡ ಸೀತೆ, ಲಕ್ಷ್ಮಣರೂ ಹೋದರು.

(ಈ ವಾಕ್ಯದಲ್ಲಿರುವ ಸರ್ವನಾಮ ಪದವನ್ನು ಗುರುತಿಸಿ ಬರೆಯಿರಿ)

ಉತ್ತರ: ______________________________

19. ಕವಿಯು ಕಾವ್ಯವನ್ನು ರಚಿಸುತ್ತಾನೆ.

(ಈ ವಾಕ್ಯವನ್ನು ಸ್ತ್ರೀಲಿಂಗ ರೂಪಕ್ಕೆ ಬದಲಿಸಿ ಬರೆಯಿರಿ)

ಉತ್ತರ: ______________________________

20. ಗುರುಗಳು ಪಾಠವನ್ನು ಮಾಡುವರು.

(ಈ ವಾಕ್ಯವನ್ನು ಭೂತಕಾಲಕ್ಕೆ ಬದಲಿಸಿ ಬರೆಯಿರಿ)

ಉತ್ತರ: ______________________________

**ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :** **(1×4=4)**

ಕೇದಾರ ದೇವಾಲಯ ಬಹು ಸುಂದರವಾಗಿದೆ. ಪುರಾಣಗಳ ಪ್ರಕಾರ ವೇದವ್ಯಾಸ ಮಹರ್ಷಿಗಳ ಉಪದೇಶದಂತೆ ಪಾಂಡವರು ಇಲ್ಲಿ ತಪಸ್ಸು ಮಾಡಿ ಈ ದೇವಸ್ಥಾನವನ್ನು ಕಟ್ಟಿದರು. ಹಾಗಾಗಿ ದೇವಸ್ಥಾನದ ಒಳಗೋಡೆಗಳಲ್ಲಿ ಪಾಂಡವ ವಿಗ್ರಹಗಳನ್ನು ಅಳವಡಿಸಿದ್ದಾರೆ. ಇನ್ನು ಕೆಲವರ ಪ್ರಕಾರ ಶಂಕರಾಚಾರ್ಯರು ಈ ದೇಗುಲವನ್ನು ಕಟ್ಟಿಸಿದರು. ಇದರ ವಾಸ್ತುವನ್ನು ನೋಡಿ ೧೫-೧೬ ನೇ ಶತಮಾನದಲ್ಲಿ ಕಟ್ಟಿರಬಹುದು ಎನ್ನುತ್ತಾರೆ. ಇತಿಹಾಸಕಾರರು ಯಾರಾದರೂ ಕಟ್ಟಿರಲಿ, ತುಂಬಾ ಸುಂದರವಾಗಿ ಕಟ್ಟಿದ್ದಾರೆ. ಗರ್ಭಗುಡಿಯ ಒಳಗೆ ಕೇದಾರೇಶ್ವರ. ಅದು ಲಿಂಗವೂ ಅಲ್ಲ, ಮೂರ್ತಿಯೂ ಅಲ್ಲ, ಬರೇ ಒಂದು ಒರಟು ಕಲ್ಲಿನ ಬಂಡೆ. ಪರ್ವತದ ಶಿಖರಾಕೃತಿಯ ಮೇಲೆ ದೇವಾಲಯ ನಿರ್ಮಿಸಿದಂತೆ ಭಾಸವಾಗುತ್ತದೆ. ಪ್ರಾಯಶಃ ಹೊರಗಿನ ಪರ್ವತದ ಸಾಂಕೇತಿಕ ಪ್ರಕೃತಿ ಪೂಜೆ ನಡೆಯುತ್ತದೆ. ಜಾತಿ, ಮತ, ಲಿಂಗ, ಯಾವ ಭೇದವೂ ಇಲ್ಲದೆ ಪ್ರತಿಯೊಬ್ಬರೂ ತಾವೇ ಮುಟ್ಟಿ ಪೂಜಿಸುವ ಅಪೂರ್ವ ಅವಕಾಶ ಇಲ್ಲಿದೆ.

**ಪ್ರಶ್ನೆಗಳು :**

21. ಪುರಾಣಗಳ ಪ್ರಕಾರ ಕೇದಾರ ದೇವಾಲಯವನ್ನು ಕಟ್ಟಿದವರು ಯಾರು ?

ಉತ್ತರ: ______________________________

______________________________

______________________________

22. ಕೇದಾರ ದೇವಾಲಯವು ನಿರ್ಮಾಣವಾದ ಕಾಲ ಯಾವುದು ?

ಉತ್ತರ: ______________________________

______________________________

______________________________

23. ಗರ್ಭಗುಡಿಯ ಒಳಗೆ ಕೇದಾರೇಶ್ವರ ಯಾವ ರೂಪದಲ್ಲಿದೆ ?

ಉತ್ತರ: ______________________________

______________________________

______________________________

24. ಕೇದಾರದಲ್ಲಿ ಪೂಜೆಯ ವಿಶೇಷತೆ ಏನು ?

ಉತ್ತರ: ______________________________

______________________________

______________________________

ಈ ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ಆರಿಸಿಕೊಂಡು ಹತ್ತು ವಾಕ್ಯಗಳಿಗೆ ಮೀರದಂತೆ ವಿಸ್ತರಿಸಿ ಬರೆಯಿರಿ. **(1×6=6)**

25. ಮಾಡಿದ್ದುಣ್ಣೋ ಮಹಾರಾಯ.

**ಅಥವಾ**

ಹಾಸಿಗೆ ಇದ್ದಷ್ಟು ಕಾಲುಚಾಚು.

**ಅಥವಾ**

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

ಉತ್ತರ: ______

ಈ ಕೆಳಗಿನ ಗದ್ಯ ಭಾಗವನ್ನು ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದಿಸಿರಿ : **(1×15=15)**

26. ಜೂನ್ ೫ರ ''ವಿಶ್ವ ಪರಿಸರ ದಿನಾಚರಣೆ''ಯಂದು ವರ್ಣರಂಜಿತ ಮೆರವಣಿಗೆಗಳು, ಎಷ್ಟೆಲ್ಲಾ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ಪರಿಸರ ದಿನಾಚರಣೆ ವರ್ಷದಿಂದ ವರ್ಷಕ್ಕೆ ವರ್ಣಮಯವಾಗುತ್ತಿದ್ದ ಹಾಗೆಯೇ ಜಗತ್ತಿನ ಪರಿಸರ ಸಮಸ್ಯೆಗಳು ದಿನದಿನಕ್ಕೆ ತೀವ್ರವಾಗುತ್ತಿವೆ. ಗ್ರಾಮೀಣ ಬದುಕಿಗೆ ಮೂಲಾಧಾರವಾದ ಕೆರೆ, ನದಿ, ಮಣ್ಣು ಗೋಮಾಳ, ಅಂತರ್ಜಲ, ಕರಾವಳಿ, ಅರಣ್ಯ, ಹುಲ್ಲುಗಾವಲು ನಶಿಸುತ್ತಿವೆ. ಬದುಕಿನ ಹೊಸ ಆಧಾರಗಳನ್ನು ಹುಡುಕುತ್ತ ಪಟ್ಟಣಗಳತ್ತ ವಲಸೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಜನರಿಗೆ ಉದ್ಯೋಗ ನೀಡಲೆಂದು ನಾವು ಆರಂಭಿಸುವ ಹೊಣೆಗಾರಿಕೆ, ಅಣೆಕಟ್ಟು ವಿದ್ಯುತ್ ಸ್ಥಾವರಗಳೂ, ಕಾರ್ಖಾನೆಗಳೂ ಇನ್ನಷ್ಟು ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಬದುಕನ್ನು ಸುಖಮಯವಾಗಿ ಮಾಡಬಲ್ಲ ಯೋಜನೆಗಳು ಹೆಚ್ಚಾದಷ್ಟು ನಮ್ಮ ಬದುಕು ದುರ್ಬರವಾಗುತ್ತ ಹೋಗುತ್ತದೆ.

ಉತ್ತರ : ______________________________

(1×15=15)

ಈ ಕೆಳಗಿನ ಆಂಗ್ಲ ಗದ್ಯ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿರಿ.

27. As a Sanyasi, one cannot be tied to a particular place. Even the Mutt is a kind of a Prison. Attachment to a particular place is also wrong. It was the great good fortune of India that Narendra took to Sannyasa and became 'Vivekananda'. Bharat became his home and its inhabitants his brothers. The Sacred task of wiping the tears of his heart. He had to travel all over the country. On his way he visited many holy places. He lodged at huts and countries and slept on the bare ground. He satisfied his hunger by begging for food. He was in the company of Sadhus, spending the time in religious discussions and holy rituals.

ಉತ್ತರ:

**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 2 ಪುಟಕ್ಕೆ ಮೀರದಂತೆ ಪ್ರಬಂಧವನ್ನು ಬರೆಯಿರಿ.**

**(1×10=10)**

28. ಇಂದಿನ ಶಿಕ್ಷಣ ಪದ್ಧತಿ.

**ಅಥವಾ.**

ಇಂದಿನ ಸಮಾಜಕ್ಕೆ ಸುದ್ದಿ ಮಾಧ್ಯಮಗಳ ಅವಶ್ಯಕತೆ.

ಉತ್ತರ:

**ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**7049 2016 (2)**

**ಕನ್ನಡ ಭಾಷೆ (ಪತ್ರಿಕೆ – 2)**

**(ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್. ಅಧಿಕಾರಿಗಳಿಗೆ ಮಾತ್ರ) (ಪುಸ್ತಕ ರಹಿತ)**

**KANNADA LANGUAGE (PAPER – 2)**

**(I.A.S., I.P.S. and I.F.S. Officers Only) (Without Books)**

| ಸಂವೀಕ್ಷಕರ ಸಹಿ<br>Invigilator's Signature | ಪ್ರಶ್ನೆ ಸಹಿತ ಉತ್ತರ ಪತ್ರಿಕೆಯ ಸಂಖ್ಯೆ<br>Question Cum Answer Booklet No. | ಬಾರ್ ಕೋಡ್ ಗಳನ್ನು ಯಾವುದೇ ರೀತಿಯಲ್ಲಿ ಹಾಳು ಮಾಡಬಾರದು<br>Do not tamper or damage the bar codes |
|---|---|---|
| | 15005 | |

Reg. No./ನೋಂದಣಿ ಸಂಖ್ಯೆ : | | | | | | |

**ಗರಿಷ್ಠ ಸಮಯ/Max. Time : 3 ಘಂಟೆಗಳು** **ಗರಿಷ್ಠ ಅಂಕಗಳು/Max. Marks : 75**

**7049 2016 (2)**

**ಅಭ್ಯರ್ಥಿಗಳಿಗೆ ಸೂಚನೆಗಳು/Instructions to Candidates**

1. ಈ ಪುಟದ ಮೇಲ್ಭಾಗದಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರಿಜಿಸ್ಟರ್ ನಂಬರನ್ನು ಬರೆಯಿರಿ.
2. ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯ ಯಾವುದೇ ಇತರ ಪುಟದಲ್ಲಿ ನಿಮ್ಮ ಹೆಸರು ಅಥವಾ ರಿಜಿಸ್ಟರ್ ನಂಬರನ್ನು ಬರೆಯಬೇಡಿ.
3. ಕಪ್ಪು ಅಥವಾ ನೀಲಿ ಪೆನ್ನನ್ನು ಉಪಯೋಗಿಸಿ ನಿಮ್ಮ ಉತ್ತರವನ್ನು ಬರೆಯಿರಿ.
4. **ಎಲ್ಲಾ ಪ್ರಶ್ನೆಗಳಿಗೆ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯಲ್ಲಿ ಒದಗಿಸಿದ ಸ್ಥಳದಲ್ಲೇ ಉತ್ತರ ಬರೆಯಿರಿ. ಉತ್ತರಕ್ಕಾಗಿ ಹೆಚ್ಚುವರಿ ಹಾಳೆಯನ್ನು ಒದಗಿಸಲಾಗುವುದಿಲ್ಲ.**
5. ಪರೀಕ್ಷಾ ಕೊಠಡಿಯನ್ನು ಬಿಡುವ ಮೊದಲು ನಿಮ್ಮ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಸ್ವತಃ ನೀವೇ ಸಂವೀಕ್ಷಕರಿಗೆ ಒಪ್ಪಿಸತಕ್ಕದ್ದು.
6. ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಉತ್ತರ ಪತ್ರಿಕೆಯನ್ನು ರದ್ದುಗೊಳಿಸಲಾಗುವುದು.

1. Write your Reg. No. in the space provided above.
2. Do not write your Name or Reg. No. on any other page of the Question Cum Answer Booklet.
3. Write your answer using Blue or Black pen.
4. **Write answers for all questions in the space provided. No additional sheet will be provided.**
5. Handover your Question Paper Cum Answer Booklet personally to the invigilator before you leave the examination hall.
6. Failure to adhere to any of the above mentioned instructions will render the paper liable for Rejection.

**Do not tamper or damage the bar codes**

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಕ್ಯಾಲ್ಕುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಆವರಣಗಳಲ್ಲಿ ತರುವುದನ್ನು ನಿಷೇಧಿಸಲಾಗಿದೆ.**

**Use of mobile phones, calculators or any other electronic gadgets is prohibited inside the examination venue/center.**

# DO NOT WRITE ANYTHING ON THIS PAGE

## ಈ ಪುಟದ ಮೇಲೆ ಏನನ್ನೂ ಬರೆಯಕೂಡದು

**ಅಂಕಗಳ ಪಟ್ಟಿ/Marks Statement (For Examiners Only)**

ಅಭ್ಯರ್ಥಿಯು ಈ ಕೆಳಗೆ ಯಾವುದೇ ಗುರುತು ಮಾಡಬಾರದು/Candidate should not make any marking on this sheet below.

| ಪ್ರಶ್ನೆ ಸಂಖ್ಯೆ Q. No. | ಅಂಕಗಳು Marks Awarded | ಪ್ರಶ್ನೆ ಸಂಖ್ಯೆ Q. No. | ಅಂಕಗಳು Marks Awarded | ಪ್ರಶ್ನೆ ಸಂಖ್ಯೆ Q. No. | ಅಂಕಗಳು Marks Awarded |
|---|---|---|---|---|---|
| 1 | | 20 | | 39 | |
| 2 | | 21 | | 40 | |
| 3 | | 22 | | 41 | |
| 4 | | 23 | | 42 | |
| 5 | | 24 | | 43 | |
| 6 | | 25 | | 44 | |
| 7 | | 26 | | 45 | |
| 8 | | 27 | | 46 | |
| 9 | | 28 | | 47 | |
| 10 | | 29 | | 48 | |
| 11 | | 30 | | 49 | |
| 12 | | 31 | | 50 | |
| 13 | | 32 | | 51 | |
| 14 | | 33 | | 52 | |
| 15 | | 34 | | 53 | |
| 16 | | 35 | | 54 | |
| 17 | | 36 | | 55 | |
| 18 | | 37 | | 56 | |
| 19 | | 38 | | 57 | |
| Total Marks : | | | | | |
| Total Marks in Words | | | | Grand Total : | |

ಮೌಲ್ಯಮಾಪಕರ ಸಹಿ, ಸಂಕೇತ ಮತ್ತು ದಿನಾಂಕ
Evaluator's signature, code with date

ಸೂಚನೆ :ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.

**'ಅ' ಪಟ್ಟಿಯಲ್ಲಿರುವ ಪದಗಳನ್ನು 'ಬ' ಪಟ್ಟಿಯಲ್ಲಿರುವ ಸೂಕ್ತ ಪದಗಳೊಂದಿಗೆ ಹೊಂದಿಸಿ ಬರೆಯಿರಿ :** **(4×1=4)**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ಅಸ್ತ್ರ | ಎ) ಕಜ್ಜ |
| 2. ಊರಿಂದ | ಬಿ) ಆದೇಶ ಸಂಧಿ |
| 3. ಕಾರ್ಯ | ಸಿ) ವಿಜಾತಿ ಸಂಯುಕ್ತಾಕ್ಷರ |
| 4. ನಾನು | ಡಿ) ಲೋಪ ಸಂಧಿ |
| | ಇ) ಉತ್ತಮ ಪುರುಷ |

ಉತ್ತರ :

1. ______________________

2. ______________________

3. ______________________

4. ______________________

**ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ವಾಕ್ಯ ಪೂರ್ತಿ ಮಾಡಿ ಬರೆಯಿರಿ :** **(4×1=4)**

5. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ ____________

(51, 49, 48, 50)

ಉತ್ತರ : ______________________

6. ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥ ಕೊಡುವ ವಾಕ್ಯ ____________

(ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ, ಸಾಧಿತ ವಾಕ್ಯ, ಮಿಶ್ರ ವಾಕ್ಯ)

ಉತ್ತರ : ______________________

7. ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ಅನುಕರಣ ಮಾಡಿ ಹೇಳುವ ಶಬ್ದಗಳು ______________ ಎನಿಸುವುವು.

(ಜೋಡಿಪದ, ದ್ವಿರುಕ್ತಿ, ಅನುಕರಣಾವ್ಯಯ, ಸಾಮಾನ್ಯಾವ್ಯಯ)

ಉತ್ತರ : ________________________________________

8. ವ್ಯವಹಾರಕ್ಕಾಗಿ ಅಥವಾ ಗುರುತಿಸಲು ಇಟ್ಟ ಹೆಸರುಗಳನ್ನು ______________ ಎನ್ನುವರು.

(ರೂಢನಾಮ, ಅನ್ವರ್ಥನಾಮ, ಸರ್ವನಾಮ, ಅಂಕಿತನಾಮ)

ಉತ್ತರ : ________________________________________

**ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ :** **(4×1=4)**

9. ಕ್ರಿಯಾಪದದ ಮೂಲರೂಪವನ್ನು __________ ಎನ್ನುವರು.

ಉತ್ತರ : ________________________________________

10. ವ್ಯಂಜನಕ್ಕೆ ______________ ಸೇರಿದಾಗ ಆಗುವ ಅಕ್ಷರವೇ ಗುಣಿತಾಕ್ಷರ.

ಉತ್ತರ : ________________________________________

11. ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಹೊಂದಿರುವ ಪದಗಳೇ __________

ಉತ್ತರ : ________________________________________

12. ಸಂಧಿಕ್ರಿಯೆ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ

______________

ಉತ್ತರ : ________________________________________

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ :** **(4×1=4)**

13. ಪರಕೀಯ : ಸ್ವಕೀಯ : : ಕೃತಘ್ನ : __________

ಉತ್ತರ : ________________________________________

14. ವಿನಾಯಕ : ಬೆನಕ :: ಪುಸ್ತಕ : __________

ಉತ್ತರ : ______________________________

15. ಅನ್ನು : ದ್ವಿತೀಯಾ ವಿಭಕ್ತಿ :: ಅಲ್ಲಿ : __________

ಉತ್ತರ : ______________________________

16. ನೂಕುನುಗ್ಗಲು : ಜೋಡಿಪದ :: ಬೇಡಬೇಡ : __________

ಉತ್ತರ : ______________________________

**ಈ ಕೆಳಗಿನ ಪ್ರಶ್ನೆಗಳಿಗೆ ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿರಿ : (4×1=4)**

17. ಚಿಕ್ಕ ಮಗು ಕೆಂಡದಂಥ ಜ್ವರದಿಂದ ಬೇಯುತ್ತಿತ್ತು.

(ಸಂಭಾವನಾರ್ಥಕ ರೂಪಕ್ಕೆ ಪರಿವರ್ತಿಸಿ)

ಉತ್ತರ : ______________________________

18. ಮೇಷ್ಟ್ರೇ ಅಳಬೇಡಿ ಸಮಾಧಾನ ಮಾಡಿಕೊಳ್ಳಿ.

(ಈ ವಾಕ್ಯವನ್ನು ಬರೆದುಕೊಂಡು ಸೂಕ್ತ ಲೇಖನ ಚಿಹ್ನೆ ಹಾಕಿರಿ)

ಉತ್ತರ : ______________________________

19. ಅವಳು ಬೆಂಗಳೂರಿಗೆ ಹೋದಳು.

(ಪುಲ್ಲಿಂಗಕ್ಕೆ ಬದಲಿಸಿ ಬರೆಯಿರಿ)

ಉತ್ತರ : ______________________________

20. ಮಗು ಆಟ ಆಡುತ್ತಿದೆ.

(ಬಹುವಚನಕ್ಕೆ ಬದಲಿಸಿ ಬರೆಯಿರಿ)

ಉತ್ತರ : ______________________________

(4×1=4)

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :

ನಮ್ಮನ್ನು ದುರ್ಬಲಗೊಳಿಸುವ ನೂರಾರು ಕತೆ, ಘಟನೆ, ಚಿತ್ರ, ಧಾರ್ಮಿಕ ಮತ್ತು ರಾಜಕೀಯದ ರಾಗದ್ವೇಷಗಳು ನಿತ್ಯವೂ ಪ್ರಸಾರವಾಗುತ್ತಿರಬಹುದು.. ಅವು ಯುವಕರ ಮನಸ್ಸನ್ನು ತಲ್ಲಣಗೊಳಿಸಲೂಬಹುದು. ಆದರೆ ಬದುಕು ಎಷ್ಟೇ ನಿರಾಶಾದಾಯಕವಾದರೂ ಅದನ್ನು ದಾಟಿ ಮೇಲೇರಲು ಬೇಕಾದ ಶಕ್ತಿ ನಮ್ಮಲ್ಲೇ ಇದೆ. ನಮ್ಮ ಸಮೀಪದಲ್ಲೇ ಇದೆ. ನಮ್ಮ ಅಂತರ್ಯದ ಆಳದಲ್ಲೇ ಇದೆ. ಜಾತಿ, ಮತ, ಕುಲ, ಗೋತ್ರ, ಭೇದವಿಲ್ಲದೆ ಪ್ರತಿಯೊಬ್ಬ ಮನುಷ್ಯನ ಮನಸ್ಸಿನ ಆಳದಲ್ಲಿ ಸಾವಿಲ್ಲದ, ನೋವಿಲ್ಲದ ದೈವೀಶಕ್ತಿ ಇದೆ. ಮನೋವಿಜ್ಞಾನಿ ಇಂದು ಈ ಮಾತನ್ನು ಹೇಳುವ ಸ್ಥಿತಿಯಲ್ಲಿದ್ದಾನೆ. ಒಟ್ಟಿನಲ್ಲಿ ನಮಗೆ ಬೇಕಾದ ಮಾರ್ಗದರ್ಶನ ಶಕ್ತಿ, ಸಹಾಯ ಸ್ಫೂರ್ತಿ, ಶಾಂತಿ ಇವೇ ಮೊದಲಾದವು ಬದುಕನ್ನು ಬೆಳಗುವ ಅಂಶಗಳು ನಮ್ಮಲ್ಲಿವೆ. ಇಂಥ ಅಪಾರ ಶಕ್ತಿಯನ್ನು ಒಳಗಡೆ ಇರಿಸಿಕೊಂಡು ಗುಲಾಮರಂತೆ ವರ್ತಿಸಲು ಕಾರಣವೇನು ? ಒಂದು : ಅಜ್ಞಾನ, ಇನ್ನೊಂದು : ಬಾಲ್ಯದಿಂದ ಬೆಳೆಸಿಕೊಂಡು ಬಂದ ನಿಷೇಧಾತ್ಮಕ ಭಾವನೆ. ಪ್ರತಿಯೊಂದು ನಿಷೇಧಾತ್ಮಕ ಭಾವನೆ ಅಥವಾ ಯೋಚನೆ, ಒಳಗಿನ ಆ ಅಪಾರ ಶಕ್ತಿಯನ್ನು ಪರಿಮಿತಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ಪ್ರತಿಯೊಂದು ಆತ್ಮ ವಿಶ್ವಾಸದ ಮತ್ತು ರಚನಾತ್ಮಕ ಯೋಚನೆ ನಮ್ಮ ಅಭ್ಯುದಯ ಅಭಿವೃದ್ಧಿಗೆ ನೆರವಾಗುತ್ತದೆ.

ಪ್ರಶ್ನೆಗಳು :

21. ಯುವಕರ ಮನಸ್ಸು ತಲ್ಲಣಗೊಳ್ಳಲು ಕಾರಣವೇನು ?

ಉತ್ತರ: ______________________________

______________________________

______________________________

22. ಬದುಕನ್ನು ಬೆಳಗುವ ಅಂಶಗಳು ಯಾವುವು ?

ಉತ್ತರ: ______________________________

______________________________

______________________________

23. ನಾವು ಗುಲಾಮರಂತೆ ವರ್ತಿಸಲು ಕಾರಣವೇನು ?

ಉತ್ತರ: ______________________________

______________________________

______________________________

24. ಯಾವುದು ನಮ್ಮ ಅಭ್ಯುದಯ ಅಭಿವೃದ್ಧಿಗೆ ನೆರವಾಗುತ್ತದೆ ?

ಉತ್ತರ: ______________________________

______________________________

______________________________

ಕೆಳಗಿನ ಗಾದೆ ಮಾತನ್ನು ಹತ್ತು ವಾಕ್ಯಗಳಿಗೆ ಮೀರದಂತೆ ವಿಸ್ತರಿಸಿ ಬರೆಯಿರಿ. **(1×6=6)**

25. ಹಾಸಿಗೆ ಇದ್ದಷ್ಟು ಕಾಲು ಚಾಚು.

**ಅಥವಾ**

ಮನಸ್ಸಿದ್ದರೆ ಮಾರ್ಗ.

**ಅಥವಾ**

ಹೆತ್ತತಾಯಿ, ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

ಉತ್ತರ : ______________________________

26. ನಿಮ್ಮ ಪ್ರದೇಶದಲ್ಲಿ ಹೆಚ್ಚಾಗಿರುವ ಕಳ್ಳರ ಹಾವಳಿಯನ್ನು ವಿವರಿಸಿ ಅದನ್ನು ನಿಯಂತ್ರಿಸಲು ಜಿಲ್ಲಾಧಿಕಾರಿಗಳಿಗೆ ಒಂದು ಅರ್ಜಿ ಬರೆಯಿರಿ. **(1×5=5)**

ಉತ್ತರ :

ಈ ಕೆಳಗಿನ ಗದ್ಯಭಾಗವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ ಬರೆಯಿರಿ : **(1×15=15)**

27. ಕಲ್ಪನಾ ಚಾವ್ಲಾ ಹರಿಯಾಣ ರಾಜ್ಯದ ಚಿಕ್ಕ ಪಟ್ಟಣ ಕರ್ನಾಲ್‌ನಲ್ಲಿ ಜುಲೈ 1, 1963 ರಲ್ಲಿ ಜನಿಸಿದಳು. ಕಲ್ಪನಾ, ತನ್ನ ವಯಸ್ಸಿನ ಇತರ ಹುಡುಗಿಯರಿಗಿಂತ ವಿಭಿನ್ನವಾಗಿದ್ದಳು. ಕಲ್ಪನಾ ಚಾವ್ಲಾ ಕಿರಿಯವಳಾಗಿದ್ದಾಗ ವಿಮಾನ ಹಾರಾಟ ನಡೆಸುವ ಕನಸು ಕಾಣುತ್ತಿದ್ದಳು. ಕಲ್ಪನಾ ದೊಡ್ಡವಳಾದಂತೆ ಭಾರತದಲ್ಲಿ ಮೊದಲ ವಿಮಾನ ಹಾರಾಟಗಳನ್ನು ನಡೆಸಿದ್ದ ಜೆ.ಆರ್.ಡಿ. ಟಾಟಾರವರ ಬಗ್ಗೆ ತಿಳಿದುಕೊಂಡಳು. ಆತನು ಅವಳ ಮಾದರಿ ಪುರುಷನಾದನು. ಕಲ್ಪನಾ ವಿಜ್ಞಾನ

ವಿಭಾಗದಲ್ಲಿ ಪದವಿ–ಪೂರ್ವ ಶಿಕ್ಷಣವನ್ನು ಪೂರ್ಣಗೊಳಿಸಿದಳು. ನಂತರ ಅವಳು 'ಏರೋಸ್ಪೇಸ್ ಎಂಜಿನಿಯರಿಂಗ್' ವಿಷಯವನ್ನು ಆರಿಸಿಕೊಂಡು ಪಂಜಾಬಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶವನ್ನು ಪಡೆದುಕೊಂಡಳು. ಅವಳು ಈ ಕಾಲೇಜಿನಲ್ಲಿ ಈ ವಿಷಯದ ಬಗ್ಗೆ ಅಧ್ಯಯನ ಮಾಡುತ್ತಿದ್ದ ಏಕೈಕ ಮಹಿಳೆಯಾಗಿದ್ದಳು. ನಂತರ ಉನ್ನತ ಶಿಕ್ಷಣವನ್ನು ಪಡೆಯಲು ಅಮೇರಿಕಾಕ್ಕೆ ತೆರಳಿದಳು.

ಉತ್ತರ: ______________________________

ಕೆಳಗಿನ ಇಂಗ್ಲೀಷ್ ಗದ್ಯಭಾಗವನ್ನು ಕನ್ನಡ ಭಾಷೆಗೆ ಅನುವಾದ ಮಾಡಿ ಬರೆಯಿರಿ : **(1×15=15)**

28. Narendra was an all-rounder. He could sing well, was good at sports and had a ready wit. He liked meditation and used to get deeply involved in his thoughts about God. Narendra studied at metropolitan school. He was very intelligent and quick at learning. He was truthful and honest. Narendra joined General Assembly's College and passed B.A. The professors of the college were surprised at the intelligence of Narendra. Prof. W. W. Hastie once admitted that Nerendra was the most brilliant and talented boy he had ever seen. He was sure that Narendra would make his mark in life.

ಉತ್ತರ: ______________________________

ಈ ಕೆಳಗಿನ ವಿಷಯದ ಬಗ್ಗೆ ಪ್ರಬಂಧವನ್ನು ಬರೆಯಿರಿ (2 ಪುಟಗಳಿಗೆ ಮೀರದಂತೆ) : (1×10=10)

29. ಭ್ರಷ್ಟಾಚಾರದ ನಿರ್ಮೂಲನೆಯಲ್ಲಿ ನಮ್ಮ ಪಾತ್ರ.

**ಅಥವಾ**

ಅತಿವೃಷ್ಟಿ – ಅನಾವೃಷ್ಟಿ.

ಉತ್ತರ :

SEAL

